ದಿಃ 25.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಬಿ.ಎಸ್.ಎಲ್ ವಕೀಲರಿಂದ ಎರಡನೇ ಎದುರುದಾರರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. 1 ನೇ ಎದುರುದಾರರ estate ಗೆ ಸಂಬಂಧಿಸಿದಂತೆ ನೀಡಿದ Insurance Policy ಮತ್ತು ಷರತ್ತುಗಳನ್ನು ಹಾಜರುಮಾಡಿದ್ದು ನಿ.ಆರ್.-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಜೆ. ವಕೀಲರಿಂದ ಅರ್ಜಿದಾರರ ಪರವಾಗಿ

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಸಾಕ್ಷಿ ಜಿಟ್ಸಿ ಆ್ಯಪ್ ಮೂಲಕ ವಿಡಿಯೋ ಕಾನ್‌ಫೆರೆನ್ಸ್ ಮೂಲಕ **Bajaj Allianz General Insurance Company, Pune** ಯ ಕಚೇರಿಯಿಂದ ಹಾಜರಾಗಿದ್ದು, ಸದರಿ ಕಚೇರಿಯ ವ್ಯವಸ್ಥಾಪಕರಾದ ಸಂತೋಷ್ ನಿರ್ವಾಣಿ, ರವರನ್ನು ಕೋ ಆರ್ಡಿನೇಟರ್ ಆಗಿ ನೇಮಿಸಿಕೊಳ್ಳಲಾಯಿತು.

ದಿಃ 27.01.2026 ರಂದು ಸಾಕ್ಷಿಗೆ ಮತ್ತು ಕೋ ಆರ್ಡಿನೇಟರ್ ರವರಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಜಿ.ಜೆ ವಕೀಲರಿಂದ ಅರ್ಜಿದಾರರ ಪರವಾಗಿ</u>

4. ನಾನು ಪೂಣೆಯ ಕಚೇರಿಯಿಂದ ಹಾಜರಾಗಿದ್ದೇನೆ. ನಾನು 2 ನೇ ಎದುರುದಾರರ ಕಂಪನಿಯಲ್ಲಿ ಹಿರಿಯ ಕಾನೂನು ಕಾರ್ಯನಿರ್ವಾಹಕಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಕಂಪನಿಯಿಂದ 1 ನೇ ಎದುರುದಾರರ ಕಾಫಿ ಪ್ಲಾಂಟೇಷನ್ ಗೆ ವಿಮೇಯನ್ನು ನೀಡಿರುತ್ತೇನೆ. ಆ ವಿಮೇ ದಿಃ 24.02.2023 ರಂದು ಊರ್ಜಿತವಾಗಿತ್ತು. ಈ ಕೇಸಿನಲ್ಲಿ ನಾವು ದಾಖಲಿಸಿರುವ ತಕರಾರಿನ ವಿಚಾರ ನನಗೆ ಗೊತ್ತು. ತಕರಾರಿನ ವಿಚಾರಗಳನ್ನು ನಾನು ಓದಿ ನೋಡಿ ಸಹಿ ಮಾಡಿದ್ದೇನೆ. ತಕರಾರಿನಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುವಂತೆ ಸತ್ಯವಾಗಿರುತ್ತದೆ. ಪಾಲಿಸಿ ಚಾಲ್ತಿಯಲ್ಲಿ ಇದ್ದ ಕಾಲದಲ್ಲಿ ಅಪಘಾತ ಸಂಭವಿಸಿದ್ದರೆ ಪರಿಹಾರವನ್ನು ನಾವು ನೀಡಲು ಬಾಧ್ಯಸ್ಥರು ಎಂದರೆ ಸರಿ. ಈ ಅರ್ಜಿಯನ್ನು ದಾಖಲಿಸಿದ ಬಳಿಕ ಅರ್ಜಿದಾರರಿಗೆ ನಾವು ಪರಿಹಾರವನ್ನು ನೀಡಿಲ್ಲ. ಸಾಕ್ಷಿ ಸ್ವತಃ ಅರ್ಜಿದಾರರು ಮೃತನ ಅಣ್ಣನಾದ ಕಾರಣ ಪರಿಹಾರ ನೀಡಿಲ್ಲ ಎಂದು ನುಡಿಯುತ್ತಾರೆ.

5. ಅರ್ಜಿದಾರರ ಅಣ್ಣ ಮೃತನಾದ ವಿಚಾರ ನ್ಯಾಯಾಲಯದಿಂದ ನೋಟೀಸು ಬಂದ ಬಳಿಕ ನಮಗೆ ತಿಳಿಯಿತು. ಅರ್ಜಿದಾರರ ಅಣ್ಣ ಮೃತನಾಗಿದ್ದರಿಂದ ಅರ್ಜಿದಾರರು ಪರಿಹಾರವನ್ನು ಪಡೆಯಲು ಬಾಧ್ಯಸ್ಥರು ಎಂದರೆ ಸುಳ್ಳು. ಯಾವುದೇ ರೀತಿ ಮೃತಪಟ್ಟರೆ ಆತನ ಕಾನೂನು ಬದ್ದ ವಾರಸುದಾರರು ಅಥವ ಮೃತ

ಸಂಬಂಧಿಕರು ಅಂತ್ಯಕ್ರಿಯೆಯನ್ನು ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಯಾರು ಮೃತರ ಅಂತ್ಯಕ್ರಿಯೆಯನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೃತ ಅಂತ್ಯಕ್ರಿಯೆ ಮತ್ತು ಪಿಂಡ ಪ್ರಧಾನ ಮಾಡುವ ಪದ್ಧತಿ ಭಾರತದಲ್ಲಿ ಇದೆ ಎಂದರೆ ಸರಿ. ಮೃತ ಮಣಿಕಂಠ ತೀರಿಕೊಂಡ ಬಳಿಕ ಆತನ ಮೃತ ದೇಹವನ್ನು ಆತನ ತಮ್ಮ ಅರ್ಜಿದಾರನಿಗೆ ಪೊಲೀಸರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೃತ ಮಣಿಕಂಠನ ಮೃತದೇಹವನ್ನು ಕಿಲಕಾಡು, ಕನ್ಯಾಕುಮಾರಿ ತಮಿಳುನಾಡಿಗೆ ಕಳುಹಿಸಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

6. ವಾಟೆಖಾನ್ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದೆ ಎಂದರೆ ಸರಿ. ಕನ್ಯಾಕುಮಾರಿ ತಮಿಳುನಾಡಿನಲ್ಲಿ ಇದೆ ಎಂದರೆ ಸರಿ. ವಾಟೆಖಾನ್ ನಿಂದ ಕನ್ಯಾಕುಮಾರಿಗೆ ಮೃತ ದೇಹವನ್ನು ಸಾಗಿಸಲು ಸಾಕಷ್ಟು ಹಣ ಖರ್ಚು ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರನು ಸಹ ಈ ಪ್ರಕರಣಲ್ಲಿ ಪರಿಹಾರವನ್ನು ಪಡೆಯಲು ಅರ್ಹ ಎಂದರೆ ಸರಿಯಲ್ಲ. ಕಾನೂನಿನ ತಪ್ಪು ಮಾಹಿತಿಯಿಂದ ಸುಳ್ಳು ಉತ್ತರವನ್ನು ನೀಡುತ್ತಿದ್ದೀರಾ ಎಂದರೆ ಸರಿಯಲ್ಲ. ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಣಿಕಂಠ ಮರಣ ಹೊಂದುವ ಪೂರ್ವದಲ್ಲಿ ಮರಗಸಿ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಮಣಿಕಂಠ ಮರಣ ಹೊಂದುವ ಸಮಯದಲ್ಲಿ ಆತನಿಗೆ 24 ವರ್ಷಕ್ಕಿಂತ ಕಡಿಮೆ ವಯಸ್ಸು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರನಿಗೆ ಆತ ಪ್ರತಿ ದಿನ ರೂ.900-00 ವೇತನ ಪಡೆಯುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಡಿ.ಕೆ.ಪಿ ವಕೀಲರಿಂದ 1 ನೇ ಎದುರುದಾರರ ಪರವಾಗಿ</u>

7. ಮೃತ ಮಣಿಕಂಠ 1 ನೇ ಎದುರುದಾರರ ಎಸ್ಟೇಟಿನಲ್ಲಿ ಕೆಲಸ ಮಾಡಿಕೊಂಡು ಪ್ರತಿ ದಿನ ರೂ.900-00 ವೇತನ ಪಡೆಯುತ್ತಿದ್ದ ಎಂದರೆ ಸಾಕ್ಷಿ ನಾವು ವಿಮೆಯನ್ನು ಪ್ರತಿ ತಿಂಗಳು ರೂ.15,000-00 ಪಡೆಯುವ 80 ಕೆಲಸಗಾರರಿಗೆ

ನೀಡಿದ್ದೇವು ಎಂದು ನುಡಿಯುತ್ತಾರೆ. ಘಟನೆ ನಡೆದ ಬಗ್ಗೆ 1 ನೇ ಎದುರುದಾರ ನನಗೆ ಮತ್ತು ನಮ್ಮ ಕಂಪನಿಯವರಿಗೆ ಮೌಖಿಕವಾಗಿ ತಿಳಿಸಿದ್ದರು ಎಂದರೆ ಸರಿ. 1 ನೇ ಎದುರುದಾರ ಕೆಲಸವನ್ನು ಮಾಡಿಸುವಾಗ ಕೆಲಸಗಾರರಿಗೆ ಸೂಕ್ತ ಭದ್ರತಾ ಸಲಕರಣೆಯನ್ನು ವ್ಯವಸ್ಥೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ನಾವು ಅರ್ಜಿದಾರನಿಗೆ ಪರಿಹಾರ ಮತ್ತು ಬಡ್ಡಿಯನ್ನು ನೀಡಬೇಕು ಎಂದರೆ ಸಾಕ್ಷಿ ಬಡ್ಡಿಯನ್ನು ನೀಡಬೇಕಾಗಿಲ್ಲ, ಆ ಬಗ್ಗೆ ವಿಮೇಯಲ್ಲಿ ನಮೂದು ಇದೆ ಎಂದು ನುಡಿಯುತ್ತಾರೆ. ಪರಿಹಾರವನ್ನು ಮತ್ತು ಬಡ್ಡಿಯನ್ನು ನೀಡಲು ನಾವು ವಿಳಂಬ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

ಸಾಕ್ಷಿಗೆ ಮತ್ತು ಕೋ ಆರ್ಡಿನೇಟರ್ ಆದ ವ್ಯವಸ್ಥಾಪಕ ಸಂತೋಷ್ ನಿರ್ವಾಣಿ ರವರಿಗೆ ಸಾಕ್ಷಿಯ ಸಾಕ್ಷ್ಯವನ್ನು ಪಿ.ಡಿ.ಎಫ್. ಫಾರ್ಮೇಟ್ ಮೂಲಕ ಇ ಮೇಲ್ ಕಳಿಸುವುದಾಗಿ ಮತ್ತು ಸದರಿ ಪಿ.ಡಿ.ಎಫ್ ಫಾರ್ಮೇಟ್ ನ ಪ್ರಿಂಟ್ ತೆಗೆದು ಸಹಿ ಮಾಡಿ ಅದರ **scanned** ಪ್ರತಿಯನ್ನು ನ್ಯಾಯಾಲಯದ ಇ ಮೇಲ್ ವಿಳಾಸಕ್ಕೆ ಇ ಮೇಲ್ ಮಾಡುವಂತೆ ಮತ್ತು **hard copy** ಯನ್ನು ನ್ಯಾಯಾಲಯದ ವಿಳಾಸಕ್ಕೆ ತಕ್ಷಣ ಅಂಚೆ ಮೂಲಕ ಕಳುಹಿಸಿಕೊಡುವಂತೆ ಸೂಚಿಸಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಕೋ ಆರ್ಡಿನೇಟರ್ ಸಹಿ

ಮಾ